**ದಿಃ 05-06-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಕೆ ಪಿ ಎಸ್ ವಕೀಲರಿಂದ**

ನಾನು ಈ ದಿನ ಈ ಪ್ರಕರಣದಲ್ಲಿ ದೋಷಾರೋಪಣಾ ಪತ್ರ ಹಾಜರುಪಡಿಸುತ್ತಿದ್ದು, ಅದನ್ನು ನಿಪಿ12 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** 1 ನೇ ಎದುರುದಾರರು ಗೈರು ಹಾಜರಿದ್ದು, ಈ ಪ್ರಕರಣದಲ್ಲಿ ಅವರು ತಕರಾರು ಸಲ್ಲಿಸದೇ ಇದ್ದುದರಿಂದ ಅವರ ಪರವಾಗಿ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 2ನೇ ಎದುರುದಾರರ ಪರವಾಗಿ ಶ್ರೀ ಕೆ ಕೆ ಎಸ್ ವಕೀಲರಿಂದ**

ದಿಃ16-05-2021 ರಂದು ಬೆಳಗಿನ 8.30 ಗಂಟೆಗೆ ನಾನು ಹೊನ್ನಾವರ – ಭಟ್ಕಳ ರಸ್ತೆಯ ಮಂಕಿ ಅರೆ ರಸ್ತೆಯಲ್ಲಿ ನಿಂತುಕೊಂಡಿದ್ದೆ. ನಾನು ರಸ್ತೆಯನ್ನು ದಾಟಲು ಪ್ರಯತ್ನ ಮಾಡುತ್ತಿರುವಾಗ ನನ್ನ ತಪ್ಪಿನಿಂದಲೇ ಈ ಅಪಘಾತ ಆಗಿರುತ್ತದೆ ಎಂದರೆ ಸರಿ ಅಲ್ಲಾ.

ನಾನು ಆಸ್ಪತ್ರೆಯಲ್ಲಿ ಒಂದು ಬಾರಿ ಮಾತ್ರ ಒಳರೋಗಿಯಾಗಿ ದಾಖಲಾಗಿದ್ದೆ. ನನ್ನ ಎಡ ಕಾಲು ಮತ್ತು ಸೊಂಟಕ್ಕೆ ಪೆಟ್ಟಾಗಿದ್ದು ನಾನು ಸಂಪೂರ್ಣ ಗುಣಮುಖನಾಗಿದ್ದೇನೆ ಎಂದರೆ ಸಾಕ್ಷಿ ಸರಿ ಅಲ್ಲಾ ಅಂತ ನುಡಿಯುತ್ತಾರೆ. ನನಗೆ ವೈದ್ಯರು ವ್ಯಾಯಾಮ ಚಿಕಿತ್ಸೆ ಮಾಡು ಅಂತ ಸೂಚಿಸಿದ್ದರು ಎಂದರೆ ಸರಿ.

ಅಪಘಾತ ಆಗುವ ಸಮಯದಲ್ಲಿ ನನಗೆ 65 ವರ್ಷ ಆಗಿತ್ತು ಎಂದರೆ ಸಾಕ್ಷಿ ಸರಿ ಅಲ್ಲಾ ನನಗೆ 55 ವರ್ಷ ಆಗಿತ್ತು ಅಂತ ನುಡಿಯುತ್ತಾರೆ. ನಾನು ಅರ್ಜಿಯಲ್ಲಿ ಹೇಳಿದಂತೆ ಯಾವುದೇ ಕೂಲಿ ಕೆಲಸ ಮಾಡುತ್ತಿರಲಿಲ್ಲ ಮತ್ತು ಅರ್ಜಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿದಷ್ಟು ನನಗೆ ಕೂಲಿ ಕೆಲಸದಿಂದ ಅದಾಯ ಇರಲಿಲ್ಲ ಎಂದರೆ ಸರಿ ಅಲ್ಲಾ. ನನಗೆ ಯಾವುದೇ ಅಂಗನ್ಯೂನ್ಯತೆ ಆಗದಿದ್ದ ಕಾರಣ ನಾನು ಈವರೆಗೆ ಯಾವುದೇ ಅಂಗನ್ಯೂನ್ಯತಾ ಪ್ರಮಾಣ ಪತ್ರ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನಾನು ಅಂಗನ್ಯೂನ್ಯತಾ ಪ್ರಮಾಣ ಪತ್ರ ಪಡೆದುಕೊಂಡಿದ್ದೇನೆ ಆದರೆ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಅಂತ ನುಡಿಯುತ್ತಾರೆ. ಈ ಅಪಘಾತದಿಂದ ನನಗೆ

ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿ ಅಲ್ಲಾ. ನಾನು ಅರ್ಜಿಯಲ್ಲಿ ಹೇಳಿದಷ್ಟು 25 ಸಾವಿರ ರೂ. ನನಗೆ ಆದಾಯ ಇರಲಿಲ್ಲ ಎಂದರೆ ಸರಿ ಅಲ್ಲಾ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಷ್ಟು ಹಣ ನನ್ನ ಔಷಧಿಗೆ, ಪರಿಚಾರಕರಿಗೆ, ಪ್ರಯಾಣಕ್ಕೆ ಮತ್ತು ಪೌಷ್ಠಿಕ ಆಹಾರಕ್ಕೆ ಖರ್ಚಾಗಿಲ್ಲ ಎಂದರೆ ಸರಿ ಅಲ್ಲಾ. ನಾನು ನನ್ನ ತಪ್ಪಿನಿಂದಲೇ ರಸ್ತೆಯನ್ನು ದಾಟಲು ಪ್ರಯತ್ನ ಮಾಡಿದ್ದರಿಂದ ಈ ಅಪಘಾತ ನಡೆದಿದೆ ಎಂದರೆ ಸರಿ ಅಲ್ಲಾ. ನಾನು ಸಂಪೂರ್ಣ ಗುಣಮುಖನಾಗಿದ್ದರಿಂದ ಅಪಘಾತ ಆಗುವ ಪೂರ್ವದಲ್ಲಿ ಯಾವ ರೀತಿ ಕೆಲಸ ಮಾಡುತ್ತಿದ್ದೆ ಅದೇ ರೀತಿ ಈಗ ಕೆಲಸ ಮಾಡಲು ಸಾಮರ್ಥ್ಯ ಹೊಂದಿದ್ದೇನೆ ಎಂದರೆ ಸರಿ ಅಲ್ಲಾ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರವೆಲ್ಲಾ ಸುಳ್ಳು ಎಂದರೆ ಸರಿ ಅಲ್ಲಾ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**